## ವಾರ್ತಾ ವಿಶ್ಲೇಷಣೆ

# ಉಷ್ಣ ಜಗತ್ತು ತರುವ ಆಪತ್ತು

ಜಗತ್ತು ಹೆಚ್ಚು ಹೆಚ್ಚು ಉಷ್ಣವಾಗುತ್ತಿದೆ. ಕಾಲಕಳೆದಂತೆಲ್ಲ ಜಗತ್ತಿನಾದ್ಯಂತ ತಾಪಮಾನ ಹೆಚ್ಚುತ್ತಿದೆ. ಇದು ಕಟ್ಟುಕತೆಯಲ್ಲ. ಶತಮಾನಗಳ ಕಾಲಮಾನದಲ್ಲಿ ನಿಧಾನವಾಗಿ ಜರಗುತ್ತಿರುವ ಕ್ರಿಯೆಯೂ ಅಲ್ಲ. ಕೆಲವು ದಶಕಗಳ ಅವಧಿಯಲ್ಲಿ ಹಲವಾರು ಭೂಭಾಗಗಳಲ್ಲಿ ಕಂಡು ಬಂದ ವಿಪರೀತ ಹವಾಮಾನ ವೈಪರೀತ್ಯದ ಪರಿಣಾಮ ಇದು. ಅದಕ್ಕೆ ನಿದರ್ಶನಗಳು ಬೇಕೆ ? ಉತ್ತರ ಧ್ರುವಕ್ಕೆ ನಿಕಟವಾಗಿರುವ ಅಲಾಸ್ಕಾದಲ್ಲಿ ಚಳಿಗಾಲ ಕಡಮೆಯಾಗುತ್ತ ಬಂದು ಹಿಮ ಹಿಂದಿನ ವರ್ಷಗಳಿಗಿಂತ ಬಹುಬೇಗ ಕರಗುತ್ತಿದೆ. ಪೆರು ದೇಶದ ಕ್ವಿಲ್‌ಕ್ಕಯಾ ಹಿಮ ಗ್ಲೇಸಿಯರ್ ಪ್ರತಿವರ್ಷ ೬೦೦ ಅಡಿಗಳಷ್ಟು ಸಂಕುಚಿತಗೊಳ್ಳುತ್ತಿದೆ. ಕ್ರಿ.ಶ. ೨೧೦೦ರ ಹೊತ್ತಿಗೆ ಈ ಗ್ಲೇಸಿಯರ್ ಮಾಯವಾಗಿಬಿಡುವುದೆಂದು ವಿಜ್ಞಾನಿಗಳು ಹೇಳುತ್ತಾರೆ. ದಕ್ಷಿಣ ಧ್ರುವಪ್ರದೇಶವಾದ ಅಂಟಾರ್ಕ್ಟಿಕಾದಲ್ಲಿ ೧೨೫೦ ಚದುರ ಮೈಲಿಗಳಷ್ಟು ಹಿಮದ ಆವರಣ ಲಾರ್‌ಸೆನ್ ಐಸ್ ಶೆಲ್ಫ್ ಎಂಬಲ್ಲಿ ಕೇವಲ ಒಂದು ತಿಂಗಳ ಅವಧಿಯಲ್ಲಿ ಕುಸಿದುಹೋಯಿತು. ಮಾಲ್ಡೀವ್, ಬಾಂಗ್ಲಾ ದೇಶ ಮುಂತಾದ ಅನೇಕ ಕಡೆ ಸಾಗರದ ಉಬ್ಬರ ಅಧಿಕವಾಗಿ, ನೀರು ಭೂಭಾಗವನ್ನು ವರ್ಷಕ್ಕೆ ಹಲವಾರು ಅಡಿಗಳಷ್ಟು ಕೊರೆದು ಒಳನುಗ್ಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಋತುಮಾನಗಳು ತಮ್ಮ ಕಾಲಾವಧಿಯನ್ನು ಬದಲಿಸಿಕೊಂಡು ಸೆಖೆಗಾಲ ಅಧಿಕವಾಗುತ್ತಿದ್ದರೆ, ಚಳಿಗಾಲ ಕ್ಷೀಣಿಸುತ್ತಿದೆ. ಹೆಚ್ಚುತ್ತಿರುವ ತಾಪಮಾನದಿಂದ ಅಗಾಧ ಹಿಮರಾಶಿ ಕರಗಿ, ಸಾಗರಗಳು ಉಬ್ಬಿದರೆ, ಭೂಮಧ್ಯದಲ್ಲಿನ ನದಿ, ಕೆರೆ, ಜಲಾಶಯಗಳ ಸಿಹಿನೀರು ಬತ್ತುತ್ತಿದೆ.

ಇದಕ್ಕೆ ಏನು ಕಾರಣ ಎಂದರೆ ಮಾನವನೇ ಕಾರಣ ಎನ್ನುತ್ತಾರೆ ವಿಜ್ಞಾನಿಗಳು. ಹವಾಮಾನದಲ್ಲಿ ಕಾರ್ಬನ್ ಡೈಯಾಕ್ಸೈಡ್ ಮುಂತಾದ ವಿಷ ಅನಿಲಗಳ ಪ್ರಮಾಣವು ವಿಪರೀತ ಪ್ರಮಾಣದಲ್ಲಿ ಹೆಚ್ಚುತ್ತಿರುವುದೇ ತಾಪಮಾನದ ಏರಿಕೆಗೆ ಕಾರಣ. ಖನಿಜ ತೈಲಗಳಾದ ಪೆಟ್ರೋಲ್, ಡೀಸಲ್ ಮುಂತಾದ ಇಂಧನಗಳು ಉರಿಯುವಾಗ ಕಾರ್ಬನ್ ಡೈಯಾಕ್ಸೈಡ್ ಮುಂತಾದ ವಿಷ ಅನಿಲಗಳು ಉತ್ಪತ್ತಿಯಾಗುತ್ತವೆ. ಕಳೆದ ಶತಮಾನದಲ್ಲಿ ಆದ ಕೈಗಾರಿಕಾ ಬೆಳವಣಿಗೆ ಮತ್ತು ಅದಕ್ಕೆ ಸರಿಸಮನಾದ ಮೋಟಾರು ವಾಹನಗಳ ವಿಪರೀತ ಬಳಕೆ ಹವಾಮಾನದಲ್ಲಿ ಈ ವಿಷ ಅನಿಲಗಳ ಮಟ್ಟ ಅಪಾಯಕಾರಿಯಾಗುವಂತೆ ಮಾಡಿದೆ. ಇದರ ಪರಿಣಾಮವಾಗಿ ಕುಡಿಯುವ ನೀರಿನ ಭೀಕರ ಅಭಾವ ತಲೆದೋರುವ ಸಾಧ್ಯತೆ ಇದೆ. ಚಂಡಮಾರುತಗಳು, ಅತಿವೃಷ್ಟಿ ಮೊದಲಾದ ಹವಾ ವೈಪರೀತ್ಯಗಳು ಹೆಚ್ಚು ಹೆಚ್ಚು ತಲೆದೋರಲಿವೆ. ಹಲವಾರು ದ್ವೀಪದೇಶಗಳು ನಿರ್ನಾಮವಾಗಿಬಿಡುತ್ತವೆ ಮತ್ತು ಸಮುದ್ರದಂಡೆಯಲ್ಲಿರುವ ನ್ಯೂಯಾರ್ಕ್, ಟೋಕಿಯೋ ಮುಂತಾದ ಬೃಹತ್ ಪಟ್ಟಣಗಳಲ್ಲಿ ಸಾಗರದ ನೀರು ನುಗ್ಗಿ ಅಲ್ಲಿನ ಜನರನ್ನು ಸ್ಥಳಾಂತರಗೊಳಿಸಬೇಕಾಗುತ್ತದೆ. ಹಲವಾರು ಜೀವ ವೈವಿಧ್ಯಗಳು ನಿರ್ವಂಶವಾಗುತ್ತದೆ.

ಈ ಭಯಾನಕ ಚಿತ್ರಣವನ್ನು ಇತ್ತೀಚಿನ ನ್ಯಾಷನಲ್ ಜಿಯಾಗ್ರಫಿಕ್ ಪತ್ರಿಕೆ ( National Geographic, September 2004) ತನ್ನ ಓದುಗರ ಮುಂದಿಟ್ಟಿದೆ. ಅದರ ಪ್ರಧಾನ ಸಂಪಾದಕರಾದ ವಿಲಿಯಮ್ ಎಲ್. ಎಲೆನ್ ಅವರು ಹೀಗೆ ಬರೆಯುತ್ತಾರೆ: " ಇದನ್ನು ಓದಿ ಅನೇಕರಿಗೆ ಪತ್ರಿಕೆಯವರು ತಮ್ಮನ್ನು ಭಯಭೀತಗೊಳಿಸುತ್ತಿರುವರೆಂದು ಕೋಪ ಬರಬಹುದು. ಅನೇಕರು ಪತ್ರಿಕೆಯ ಚಂದಾವನ್ನು ನಿಲ್ಲಿಸಲೂ ಬಹುದು. ಆದರೆ ಈ ವಿಷಯ ಉಪೇಕ್ಷೆ ಮಾಡುವಂತಹುದಲ್ಲ. ಓದುಗರ ಗಮನಕ್ಕೆ ತರಲೇಬೇಕಾದ ಗಂಭೀರವಾದ ಮಹತ್ವದ ಸಂಗತಿ ಇದು. ನಾನು ಕೆಲವು ಚಂದಾದಾರರು ಪತ್ರಿಕೆಯನ್ನು ತರಿಸುವುದನ್ನು ನಿಲ್ಲಿಸುವುದನ್ನೂ ಹೇಗೋ ತಾಳಿಕೊಳ್ಳಬಲ್ಲೆ. ಆದರೆ ಭೂಗರ್ಭ ವಿಜ್ಞಾನದ ಅತ್ಯಂತ ಮಹತ್ವದ ಈ ವಿಷಯವನ್ನು ನಿಮ್ಮಗಳ ಸಮ್ಮುಖಕ್ಕೆ ತರದೆ ಇದ್ದರೆ, ನನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವುದಕ್ಕೂ ನನಗೆ ನಾಚಿಕೆಯಾಗುತ್ತದೆ."

ನಮ್ಮ ಪುರಾಣಗಳ ಪ್ರಳಯವರ್ಣನೆಯನ್ನು ನೆನಪಿಗೆ ತರುವ ಈ ಭವಿಷ್ಯದ ಗುಂಡಾಂತರಕ್ಕೆ ಪರಿಹಾರವೇನು ಎಂದರೆ ಕಾರ್ಬನ್ ಡೈಯಾಕ್ಸೈಡ್ ಮತ್ತು ಇತರ ವಿಷಪೂರಿತ ಅನಿಲಗಳ ಜಾಗತಿಕ ಮಟ್ಟವನ್ನು ನಿಯಂತ್ರಣಗೊಳಿಸುವುದು. ಇದರಿಂದ ಏರುತ್ತಿರುವ ಉಷ್ಣತೆಯನ್ನು ಸ್ವಲ್ಪ ಮಟ್ಟಿಗೆ ನಿಧಾನಗೊಳಿಸಲು ಸಾಧ್ಯವಾಗಬಹುದೇ ಹೊರತು ಅದನ್ನು ತಡೆಯಲು ಸಾಧ್ಯವಾಗದು ಎನ್ನುತ್ತಾರೆ ವಿಜ್ಞಾನಿಗಳು. ಜಪಾನಿನ ಕೊಯಾಟೋ ಎಂಬ ಕಡೆ ಹಲವಾರು ದೇಶಗಳು ಸೇರಿ ಈ ಬಗ್ಗೆ ನಿಯಮಗಳನ್ನು ಮಾಡಿ, ಅವುಗಳನ್ನು ಅನುಷ್ಠಾನಕ್ಕೆ ತರುವ ಒಪ್ಪಂದಕ್ಕೆ ಸಹಿ ಹಾಕಿದ್ದವು. ಅದರ ಪ್ರಬಲ ವಿರೋಧಿ ಯಾರು ಗೊತ್ತೇ ? ಯಾವ ದೇಶ ಇಡೀ ಪ್ರಪಂಚದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ತೈಲವನ್ನು ಖರ್ಚುಮಾಡುತ್ತಿದೆಯೋ, ಯಾವುದು ತಾನು ಜಗತ್ತಿನ ರಕ್ಷಕನೆಂದು ಜಂಭ ಕೊಚ್ಚಿಕೊಳ್ಳುತ್ತಿದೆಯೋ ಅಂತಹ ಸೂಪರ್ ಪವರ್ ಅಮೇರಿಕಾ. ಹೀಗಿದ್ದಮೇಲೆ ಬಡದೇಶಗಳ ಪಾಡೇನು ? ಅವು ಕೂಡ ಈ ಜಾಗತಿಕ ವಾತಾವರಣ ವೈಪರೀತ್ಯದ ಭೀಕರ ಪರಿಣಾಮಗಳನ್ನು ಅನುಭವಿಸಲೇ ಬೇಕಾಗುತ್ತದೆ. ವಿಜ್ಞಾನಿಗಳ ಈ ಎಚ್ಚರಿಕೆಯ ಘಂಟೆಯನ್ನು ಎಂದು ತಾನೇ ಜಗತ್ತಿನ ರಾಜಕೀಯ ಮುಖಂಡರು ಆಲಿಸಿಯಾರು ಮತ್ತು ಉಷ್ಣ ದುರಂತದ ಶಮನಕ್ಕೆ ಕ್ರಮವನ್ನು ಕೈಗೊಂಡಾರು ? ಇದು ಇಂದು ನಮ್ಮ ಮುಂದಿರುವ ಅತಿ ಮಹತ್ವದ ಪ್ರಶ್ನೆ.